# ನವಿಲುಗನ್ನಡಿ

- ಏಪ್ರಿಲ್ ಸಂಚಿಕೆಯ ಮುಖಪುಟದಲ್ಲಿ ಮುದ್ದು ಮಗುವಿನ ಚಿತ್ರ ಸೆಳೆಯಿತು, ಆದರೆ ಕಿವಿಗೆ ಹೂ ಮುಡಿಸುವ ಅವಶ್ಯಕತೆ ಇರಲಿಲ್ಲ. ಹಾಡು ಅರಳುವ ಸಮಯ, ಹಾಡುವ ಗುಣಹೊಂದಿರುವ ಕವಿತೆ ತೀರಾ ವಿರಳ ಎನ್ನುವ ಮಾತು, ಗದ್ಯಪದ್ಯಗಳ ನಡುವಿನ ವ್ಯತ್ಯಾಸವೂ ತೆಳುವಾಗಿರುವುದು ವಾಸ್ತವದ ಚಿತ್ರಣ ನೀಡಿದಂತಿದೆ. 'ಕೆ.ಟಿ. ಗಟ್ಟಿ: ವೈಚಾರಿಕತೆ, ಜನಪ್ರಿಯತೆಯ ಅಪೂರ್ವಸಂಗಮ'

**ಶಂಕರನಾರಾಯಣ ಭಟ್, ಮಾಡಗೇರಿ**

- 'ಪ್ರೀತಿ ಇಲ್ಲದ ಮೇಲೆ ಜೀವನ ನಡೆಯುವುದು ಹೇಗೆ?' ಕುವೆಂಪು ರಾಷ್ಟ್ರೀಯ ಪುರಸ್ಕಾರ ಪುರಸ್ಕೃತ ಬಂಗಾಳಿ ಸಾಹಿತ್ಯದ ದಿಗ್ಗಜ ಶೀರ್ಷೇಂದು ಮುಖೋಪಾಧ್ಯಾಯರ ಸಂದರ್ಶನ ಅಗಾಧ ಅನುಭಾವ ನದಿಯಂತೆ ಹರಿದು ಮನಸ್ಸನ್ನು ಸಶಕ್ತಗೊಳಿಸಿತು. ಇಂತಹ ಮಾಗಿದ ಜೀವಿಗಳ ನುಡಿಯನ್ನು ಇನ್ನಷ್ಟು ಆಲಿಸಬೇಕೆನಿಸಿತು.

**ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ**

- ಏಪ್ರಿಲ್ ಸಂಚಿಕೆ ಹಲವು ವಿಷಯಗಳಿಂದ ಮನಕ್ಕೆ ಮುದ ನೀಡಿತು. ಕಥೆ, ಕವನ ಮತ್ತು ಲೇಖನಗಳು ಒಂದಕ್ಕಿಂತ ಒಂದು ಸೊಗಸಾಗಿ ಮೂಡಿಬಂದಿದೆ. ಜಿ.ವಿ. ಆನಂದಮೂರ್ತಿ ಅವರ 'ಮಣಿಮೇಕಲೆ' ಕಥೆ ಅದ್ಭುತವಾಗಿದೆ. ಭಾಷೆ, ಶೈಲಿ ಮತ್ತು ಪಾತ್ರಗಳ ಮೂಲಕ ಕಥೆ ಓದುಗನನ್ನು ಆವರಿಸಿಕೊಳ್ಳುತ್ತದೆ.

**ಜನಾರ್ಧನ ರಾವ್, ಹೊಸಪೇಟೆ**

- ಜಿ.ವಿ.ಆನಂದಮೂರ್ತಿ ಅವರ 'ಮಣಿಮೇಕಲೆ' ಒಂದು ಸುಂದರ ದೃಶ್ಯ ಕಾವ್ಯದಂತೆ ಕಂಡಿತು. ಕಥಾ ಹಂದರ, ಭಾಷಾ ಶೈಲಿ ಸಂಭಾಷಣೆ ತುಂಬಾ ಚೆನ್ನಾಗಿದೆ. ಕಥೆ ಕಟ್ಟುವ ರೀತಿ ಮನೋಜ್ಞವಾಗಿದೆ.

**ಎಸ್.ಆರ್.ನರಸಿಂಹ ಪ್ರಸಾದ್, ಕುಣಿಗಲ್**

- ಕೆ.ಎಲ್.ಶ್ರೀವತ್ಸ ಅವರ 'ಅಳಿಸುಳಿಗಳು' ಪ್ರಬಂಧ ಚಿಂತನಾತ್ಮಕವಾಗಿದೆ. 'ಅಳಿಸು' ಎಂಬ ಸಾಮಾನ್ಯ ಪದದ ಒಳಪದರವನ್ನು ನವಿರಾಗಿ ಬಿಡಿಸಿಟ್ಟಿದ್ದಾರೆ.

**ಅಶ್ವಿನಿ ಬಿರಾದಾರ, ಆಳಂದ**




- ಸ್ವಯಂಪ್ರಭಾ ಮಹೇಶ್ ಅವರ 'ಇಬ್ಬರೂ ಬರುತ್ತಾರೆ' ಕವನ ತುಂಬಾ ಇಷ್ಟವಾಯಿತು. ಈ ಕವಿತೆಯೊಳಗೊಂದು ಕವಿತೆ ಓದಿಗೆ ಸಿಗುತ್ತದೆ. ಸಾಲುಗಳು ಸಹನೆಯ ಚೌಕಟ್ಟಿನೊಳಗೆ ಸುಳಿದು ಬದುಕನ್ನು ಗೆಲುವಾಗಿಸುವುದು ಕವಿತೆಯ ಅಂತರಾಳವಾಗಿದೆ. ತುಂಬ ಸೊಗಸಾದ ಕವಿತೆ, ಮತ್ತೆ ಮತ್ತೆ ಓದಬೇಕೆನ್ನುವ ಕವಿತೆ.

**ನಾಗರಾಜ ಬಿ.ನಾಯ್ಕ, ಹುಬ್ಬಣಗೇರಿ**

**ಕನಸು ಸೋಮಶೇಖರ್, ಕದಿರೇಹಳ್ಳಿ**

- ಮಧುರಾ ಕರ್ಣಮ್ ಅವರ 'ಅನುಬಂಧ' ಕಥೆ ಆಶಾಭಾವವನ್ನು ಹೊಮ್ಮಿಸುವ ಮೂಲಕ ಗಮನ ಸೆಳೆಯುತ್ತದೆ. ಕೆಲವರ ಹೃದಯದಲ್ಲಿ ಈಗಲೂ ಜಿನುಗುತ್ತಿರುವ ಮಾನವ ಸಂಬಂಧಗಳ ಪ್ರೇಮದ ಸೆಲೆಗೆ ಕಥೆ ಸಾಕ್ಷಿಯಾಗುತ್ತದೆ.

**ಕಾವ್ಯಾ ಹಿರೇಮಠ, ಧಾರವಾಡ**

- ಬ್ರಿಟಿಷ್ ಕಲಾವಿದ ಡೇಮಿಯನ್ ಅವರ 'ಟೆಂಪಲ್' ಕಲಾಕೃತಿ ಅಪರೂಪದ್ದಾಗಿದೆ. ಹಾಡುವ ಕವಿತೆಗಳು ಮಾಯವಾಗುತ್ತಿರುವ ಈ ದಿನಗಳಲ್ಲಿ ಅವುಗಳ ರಚನೆಗೆ ಪ್ರೋತ್ಸಾಹ ನೀಡಿದ್ದು ಪ್ರಶಂಸನೀಯ.

**ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ**